**ಪ್ರಧಾನ ಹಿರಿಯ ದಿವಾಣಿ ನ್ಯಾಯಧೀಶರು ಹಾಗೂ ಜೆ.ಎಂ.ಎಫ್.ಸಿ. ಇವರ ನ್ಯಾಯಾಲಯ, ಮುಧೋಳ**

**ಸಾಕ್ಷಿಗೆ ಇಂದು ದಿನಾಂಕ 13.10.2025 ರಂದು ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ BHK ವಕೀಲರಿಂದ :**

ನನ್ನ ವಿವಾಹ ಪ್ರತಿವಾದಿ 1 ವಿನ ಜೊತೆ ದಿಃ 15.05.2015 ರಂದು ಆಗಿರುವುದು. ವಿವಾಹವಾದ ನಂತರ ನಾನು ನನ್ನ ಗಂಡನ ಮನೆಯಲ್ಲಿ 5 ವರ್ಷಗಳ ವರೆಗೆ ವೈವಾಹಿಕ ಜೀವನ ನಡೆಸಿರುವೆನು. ನನ್ನ ವಿವಾಹವಾದ 5-6 ತಿಂಗಳಲ್ಲೇ ನನ್ನ ಗಂಡ ಪ್ರತಿವಾದಿ 1 ರವರಿಗೆ ಸೋಯಾಸಿಸ್ ಕಾಯಿಲೆ ಬಂದಿರುವುದು ಎಂದರೆ ಸರಿ. ನಾನು ಈಗ ಕಳೆದ 5 ವರ್ಷಳಿಂದ ಚಿಕ್ಕೋಡಿ ಪಟ್ಟಣದಲ್ಲಿ ವಾಸವಾಗಿರುವೆನು. ನನ್ನ ಗಂಡನ ತಂದೆ ಸುಭಾಷ ಕೋಳಿ ಮೃತ ಪಟ್ಟಿರುವರು ಎಂದರೆ ಸರಿ. ಇವರು ಸಹ ಕ್ಯಾನ್ಸರ್ ಕಾಯಿಲೆಯಿಂದ ಬಳಲಿ ಮೃತ ಪಟ್ಟಿರುವರು ಎಂದರೆ ಸರಿ.

2. ನಾನು ಚಿಕ್ಕೋಡಿ ನ್ಯಾಯಾಲಯದಲ್ಲಿ ಪ್ರತಿವಾದಿ 1 ವಿನ ವಿರುದ್ದ ಜೀವನಾಂಶ ಕೋರಿ ಪ್ರಕರಣ ದಾಖಲು ಮಾಡಿರುವೆನು ಎಂದರೆ ಸರಿ. ಅದು ವಿಚಾರಣೆಯ ಹಂತದಲ್ಲಿ ಇರುವುದು ಎಂದರೆ ಸರಿ. ಪ್ರತಿವಾದಿ 1 ನನಗೆ ಸರಿಯಾಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿರುವುದಿಲ್ಲ ಮತ್ತು ಮಾನಸಿಕವಾಗಿ ಕಿರುಕುಳ ನೀಡುತ್ತಿದ್ದನು. ಈ ವಿಷಯವಾಗಿ ನಾನು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲು ಮಾಡಿರುವುದಿಲ್ಲ. ಅದೇ ರೀತಿ ನ್ಯಾಯಾಲಯದಲ್ಲಿಯೂ ಸಹ ಖಾಸಗಿ ದೂರನ್ನು ದಾಖಲು ಮಾಡಿರುವುದಿಲ್ಲ. ಪ್ರತಿವಾದಿ 2 ರವರಿಗೆ ಈಗ ಸುಮಾರು 58 ವರ್ಷಗಳಾಗಿರಬಹುದು ಎಂದರೆ ಸರಿ. ಪ್ರತಿವಾದಿ 2 ರವರು ಪ್ರತಿವಾದಿ 1 ಮತ್ತು 3 ರವರ ಮೇಲೆ ಅವಲಂಬಿತರಾಗಿರುವರು ಎಂದರೆ ಸರಿಯಲ್ಲ.

3. ದಾವಾ ಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳು ಆಗಿರುವವು. ಈ ಆಸ್ತಿಗಳು ಯಾರಿಂದ ಹೇಗೆ ಬಂದಿರುವವು ಎಂಬುದರ ಬಗ್ಗೆ ನನಗೆ ಹೇಳಲು ಆಗುವುದಿಲ್ಲ. ಮುಧೋಳ ಪಟ್ಟಣದ

ಸಿಟಿಎಸ್ ಆಸ್ತಿ ನಂ. 3051 ಇದು ಯಾರಿಂದ ಹೇಗೆ ಬಂದಿರುವುದು ಮತ್ತು ಈಗ ಯಾರ ಹೆಸರಿನಲ್ಲಿ ಇರುವುದು ಎಂದು ನನಗೆ ಹೇಳಲು ಆಗುವುದಿಲ್ಲ. ನಿಪಿ 3 ರ ದಾಖಲೆಯಲ್ಲಿ ರೋಹಿಣಿ ಮಾದೇವ ಕೋಳಿ, ಸಂಗಿತಾ ಗುರುಹೊಸುರು, ಸುನೀತಾ ಕೋಟಿ, ಪದ್ಮಾವತಿ ಕೋಳಿ, ಅಶ್ವಿನಿ ಕೋಳಿ, ಸದಾಶಿವ ಕೋಳಿ, ಕಲಾವತಿ ಕೋಳಿ, ಸಂತೋಷ, ಸಚಿನ ತಂದೆ ಸದಾಶಿವ ಕೋಳಿ ಇವರ ಹೆಸರುಗಳು ಇರುವುದು ಎಂದರೆ ಸರಿ. ಈ ಆಸ್ತಿಯು ಜಂಟಿಯಾಗಿ ಹೆಸರಿನಲ್ಲಿ ಇರುವುದರಿಂದ ಇದರಲ್ಲಿ ನನಗೆ ಎಷ್ಟು ಪಾಲು ಬರುವುದು ಎಂಬುದರ ಬಗ್ಗೆ ನನಗೆ ಹೇಳಲು ಬರುವುದಿಲ್ಲ ಎಂದರೆ ಸರಿ. ಈ ಅಸ್ತಿಯಲ್ಲಿ ನನ್ನ ಗಂಡನಿಗೆ ಎಷ್ಟು ಹಕ್ಕು ಇರುವುದು ಎಂಬುದರ ಬಗ್ಗೆ ಹೇಳಿ ಬರೆಸಿರುವುದಿಲ್ಲ.

4. ನಿಪಿ 3 ರ ದಾಖಲೆಯ ಆಸ್ತಿಗೆ ಸಂಬಂದಪಟ್ಟಂತೆ ನಿಪಿ 13 ರ ದಾಖಲೆಯ ತೀರ್ಪಿನಲ್ಲಿ ದಾವಾ ಆಸ್ತಿಯನ್ನಾಗಿ ಸೇರ್ಪಡೆ ಮಾಡಿರುವುದಿಲ್ಲ ಎಂದರೆ ಸರಿ. ಗೋವಾ ರಾಜ್ಯದಲ್ಲಿ ಇರುವಂತಹ ಆಸ್ತಿಯೂ ಸಹ ನಿಪಿ 13 ರ ಅಸಲು ದಾವಾ ನಂ. 44/2019 ರ ದಾವೆಯಲ್ಲಿ ದಾವಾ ಆಸ್ತಿಯಾಗಿರುವುದಿಲ್ಲ ಎಂದರೆ ಸರಿ. ಗೋವಾ ರಾಜ್ಯದಲ್ಲಿಇರುವ ಆಸ್ತಿಯು ನನ್ನ ಅತ್ತೆಯ ಹೆಸರಿನಲ್ಲಿ ಇರುವುದು. ಗೋವಾ ರಾಜ್ಯದಲ್ಲಿ ಇರುವ ಆಸ್ತಿಯು ನನ್ನ ಅತ್ತೆ ಪ್ರತಿವಾದಿ 1 ರವರು ಖರೀದಿ ಮಾಡಿರುವಂತಹ ಆಸ್ತಿ ಎಂದರೆ ಸರಿಯಲ್ಲ, ಅದು ಜಂಟಿ ಕುಟುಂಬದ ಆಸ್ತಿ ಆಗಿರುವುದು. ಈ ಆಸ್ತಿ ಯಾವ ರೀತಿಯಾಗಿ ಜಂಟಿ ಕುಟುಂಬದ ಆಸ್ತಿ ಎಂದು ನನಗೆ ಹೇಳಲು ಬರುವುದಿಲ್ಲ. ನನ್ನ ಗಂಡನಿಗೆ ಸೋಯಾಸಿಸ್ ಕಾಯಿಲೆ ಇರುವುದರಿಂದ ಆ ಕಾರಣಕ್ಕಾಗಿ ಆತನ ಜೊತೆ ವೈವಾಹಿಕ ಜೀವನ ಮಾಡುವ ಇಚ್ಚೆ ನಾನು ಹೊಂದಿರುವುದಿಲ್ಲ ಅಂತ ಸೂಚಿಸುವುದು ಸರಿಯಲ್ಲ. ಈಲ್ಲಿಯವರೆಗೂ ಸಹ ನನ್ನ ಗಂಡ ನನ್ನ ಜೊತೆ ವೈವಾಹಿಕ ಜೀವನ ನಡೆಸುವ ಇಚ್ಚೆ ಹೊಂದಿದ್ದರೂ ಸಹಿತ ನಾನು ಆತನ ಜೊತೆ ವೈವಾಹಿಕ ಜೀವನ ನಡೆಸಿರುವುದಿಲ್ಲ ಅಂತ ಸೂಚಿಸುವುದು ಸರಿಯಲ್ಲ. ನನ್ನ ಗಂಡ ಸೋಯಾಸಿಸ್ ಕಾಯಿಲೆ ಸಂಬಂಧಪಟ್ಟಂತೆ ಚಿಕಿತ್ಸೆ ಪಡೆಯುತ್ತಿರುವನು ಎಂದರೆ ಸರಿ. ಪ್ರತಿವಾದಿ 1 ರವರ ಚಿಕಿತ್ಸೆಗಾಗಿ ಪ್ರತಿವಾದಿ 2 ರವರು ಸಾಕಷ್ಟು ಹಣ ಖರ್ಚು ಮಾಡಿರುವರು ಎಂದರೆ ಸರಿಯಲ್ಲ. ಪ್ರತಿವಾದಿ 1 ರವರ ತಂದೆಯ ವೈದ್ಯಕೀಯ ಚಿಕಿತ್ಸೆಗಾಗಿ ಸಾಕಷ್ಟು ಹಣ ಖರ್ಚು ಮಾಡಿರುವರು ಎಂದರೆ ಸರಿ.

5. ನಾನು ನನ್ನ ಗಂಡನ ವಿರುದ್ದ ಚಿಕ್ಕೋಡಿ ಮತ್ತು ಮುಧೋಳ ನ್ಯಾಯಾಲಯದಲ್ಲಿ ವಿನಾಃ ಕಾರಣ ತೊಂದರೆ ನೀಡುವ ಸಲುವಾಗಿ ದಾಖಲು ಮಾಡಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ನನಗೆ ಮತ್ತು ವಾದಿ 2 ರವರಿಗೆ ಯಾವುದೇ ಪಾಲು ಇರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ 1 ರವರು ಈಗಲೂ ಸಹ ವಾದಿ 2 ರವರ ಜಾವಾಬ್ದಾರಿಯನ್ನು ಮತ್ತು ನನ್ನ ಪಾಲನೆ ಪೋಷಣೆಯ ಜವಾಬ್ದಾರಿಯನ್ನು ತೆಗೆದುಕೊಳ್ಳಲು ತಯಾರು ಇರುವುದಿಲ್ಲ. ನಾನು ಪ್ರತಿವಾದಿ 2 ರವರ ಜೊತೆ ವೈವಾಹಿಕ ಜೀವನ ನಡೆಸಲು ತಯಾರು ಇರುವುದಾಗಿ ಎಂದು ಹೇಳಿ ನ್ಯಾಯಾಲಯದಲ್ಲಿ ಪ್ರಕರಣ ದಾಖಲು ಮಾಡಿರುವುದಿಲ್ಲ.

**ಮರುವಿಚಾರಣೆಃ** ಇರುವುದಿಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು. )

ಓ . ಹೇ. ಕೆ . ಸರಿ ಅದೆ .

VIJAYAKUMAR KANNUR

Digitally signed by VIJAYAKUMAR KANNUR
Date: 2025.10.14 11:02:18 +0530

ಸಾಕ್ಷಿಯ ಸಹಿ

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಜೆ.ಎಂ.ಎಫ್.ಸಿ., ಮುಧೋಳ